918(1040) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯಲ್ಲಿ ಸಾರಿಗೆ ಸಂಸ್ಥೆ ಘಟಕ (ಡಿಪೋ) ಸಂಖ್ಯೆ ಎಷ್ಟು ಹಾಗೂ ಯಾವ ಯಾವ ತಾಲ್ಲೂಕು ಕೇಂದ್ರಗಳಲ್ಲಿ ಸದರಿ ಘಟಕಗಳಿವೆ ;

ಆ) ಕಲಘಟಗಿಗೂ ಸಹ ಡಿಪೋ ಸ್ಥಾಪಿಸುವ ವಿಚಾರ ಸರ್ಕಾರಕ್ಕಿದೆಯೇ ;

ಇ) ಯಾವಾಗ ಮಂಜೂರಾತಿ ನೀಡಲಾಗುವುದು;

ಈ) ಇದಕ್ಕಾಗಿ ಜಾಗ ಗುರುತಿಸಲಾಗಿದೆಯೇ;

ಉ) ಕಲಘಟಗಿ ಬಸ್ ಡಿಪೋ ಬೇಕೆಂಬ ಬೇಡಿಕೆ ಬಹಳ ದಿನಗಳಿಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಊ) ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗುತ್ತದೆ;

ಋ) ಸದರಿ ತಾಲ್ಲೂಕಿನಲ್ಲಿ ಬಸ್ಸುಗಳ ಕೊರತೆ ಇರುವುದರಿಂದ ಹೊಸ ಬಸ್ ಮಾರ್ಗಗಳನ್ನು ಹಾಗೂ ಹಾಲಿ ಇರುವ ಮಾರ್ಗಗಳಲ್ಲಿ ಹೆಚ್ಚುವರಿ ಬಸ್‌ಗಳನ್ನು ಒದಗಿಸಲಾಗುವುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) 05(ಐದು)
ಹುಬ್ಬಳ್ಳಿ – 04(ನಾಲ್ಕು)
ಧಾರವಾಡ – 01 (ಒಂದು)

ಆ) ಹೌದು

ಇ) ಭೂಸ್ವಾಧೀನದ ನಂತರ.

ಈ) ಹೌದು

ಉ) ಹೌದು

ಊ) ಭೂಸ್ವಾದೀನ ಪ್ರಕ್ರಿಯೆಗೆ ಕ್ರಮ ತೆಗೆದುಕೊಳ್ಳಲಾಗುವುದು.

ಋ) ಹೌದು

919(1274) ಶ್ರೀ ದೇಸಾಯಿ ಶಿವಮುತ್ತಪ್ಪ ಮಡಿವಾಳಪ್ಪ (ಹೂವಿನ ಹಿಪ್ಪರಗಿ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಅಣೆಕಟ್ಟಿನಿಂದ ಬಿಜಾಪುರ ಜಿಲ್ಲೆಗೆ ಎಷ್ಟು ಎಕರೆ ಜಮೀನಿಗೆ ನೀರನ್ನು ಒದಗಿಸಬೇಕಾಗಿದೆ :

ಆ) ಅದರಲ್ಲಿ, ಎಷ್ಟು ಎಕರೆ ಜಮೀನಿಗೆ ಈಗಾಗಲೇ ನೀರು ಒದಗಿಸಲಾಗಿದೆ.

ಇ) ಬಾಕಿ ಪ್ರದೇಶಕ್ಕೆ ನೀರನ್ನು ಬಿಡುಗಡೆ ಮಾಡಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) 4,39,459 ಎಕರೆ (1,77,919 ಹೆಕ್ಟೇರ್)

ಆ) 2,06,245 ಎಕರೆ (83,500 ಹೆಕ್ಟೇರ್)

ಇ) ಉಳಿದ ಕಾಮಗಾರಿಗಳನ್ನು ಮಾರ್ಚ್ 2006ರೊಳಗೆ ಪೂರ್ಣಗೊಳಿಸಲು ಟೆಂಡರ್ ಪ್ರಕ್ರಿಯೆ ಹಾಗೂ ಕಾಮಗಾರಿಗಳ ಪ್ರಗತಿ ವಿವಿಧ ಹಂತದಲ್ಲಿವೆ.